**ಶೇ 6.5ರ ಉಳಿತಾಯ ಬಾಂಡುಗಳು 2003 (ತೆರಿಗೆಗೆ ಒಳಪಡದವು)– ಪ್ರಾದೇಶಿಕ ಕಚೇರಿ**

ಉಲ್ಲೇಖ ಸಂಖ್ಯೆ: ಸಿಒ.ಡಿಟಿ.13.01.298/ಹೆಚ್–3572/2002–03 15 ಮಾರ್ಚ್ 2003

ಪ್ರಾದೇಶಿಕ ನಿರ್ದೇಶಕರು,
ಭಾರತೀಯ ರಿಸರ್ವ್ ಬ್ಯಾಂಕ್
ಸಾರ್ವಜನಿಕ ಋಣದ ಕಚೇರಿ,
ಅಹಮದಾಬಾದ್/ಬೆಂಗಳೂರು/ಭುವನೇಶ್ವರ/ಬೈಕುಲ್ಲ, ಮುಂಬೈ–400008/
ಕೋಟೆ–ಮುಂಬೈ/ಚೆನ್ನೈ/ಗುವಾಹಟಿ/ಹೈದರಾಬಾಡ್/ಜೈಪುರ/ಕಾನ್ಪುರ/
ಕೋಲ್ಕತ್ತ/ನಾಗಪುರ/ನವದೆಹಲಿ/ಪಾಟ್ನಾ/ತಿರುವನಂತಪುರಂ.

ಮಾನ್ಯರೇ,

**ಶೇ 6.5ರ ಉಳಿತಾಯ ಬಾಂಡುಗಳು, 2003 (ತೆರಿಗೆಗೆ ಒಳಪಡದವು)**

ಭಾರತ ಸರ್ಕಾರದವರು ಅವರ ಅಧಿಸೂಚನೆ ಸಂಖ್ಯೆ 4(9)–ಡಬ್ಲ್ಯೂ ಮತ್ತು ಎಂ/2003, ದಿನಾಂಕ 13 ಮಾರ್ಚ್ 2003 ರ ಅನ್ವಯ 24ನೇ ಮಾರ್ಚ್ 2003 ರಿಂದ ಪರಿಣಮಿಸುವಂತೆ ಶೇ 6.5 ರ ಉಳಿತಾಯ ಬಾಂಡುಗಳನ್ನು (ತೆರಿಗೆಗೆ ಒಳಪಡದ) ಬಿಡುಗಡೆ ಮಾಡಲು ನಿರ್ಧರಿಸಿದ್ದಾರೆ. ಸರ್ಕಾರದ ಅಧಿಸೂಚನೆಯ ಪ್ರತಿಯನ್ನು ಲಗತ್ತಿಸಲಾಗಿದೆ. ಬಾಂಡ್‌ನ ಪ್ರಮುಖ ಲಕ್ಷಣಗಳನ್ನು ಈ ಕೆಳಗೆ ವಿವರಿಸಲಾಗಿದೆ.

**2. ಹೂಡಿಕೆಗೆ ಅರ್ಹತೆ**

ಬಾಂಡುಗಳನ್ನು–

(i) ಅನಿವಾಸಿ ಭಾರತೀಯನಾಗಿರುವ ಒಬ್ಬ ವ್ಯಕ್ತಿ–

(ಎ) ತನ್ನ ವೈಯಕ್ತಿಕ ಸಾಮರ್ಥ್ಯದಲ್ಲಿ, ಅಥವಾ

(ಬಿ) ಜಂಟಿ ಆಧಾರದಲ್ಲಿ ವೈಯಕ್ತಿಕ ಸಾಮರ್ಥ್ಯದಲ್ಲಿ, ಅಥವಾ

(ಸಿ) ಯಾರೇ ಒಬ್ಬರು ಅಥವಾ ಜೀವಂತ ವಾರಸುದಾರ ಆಧಾರದಲ್ಲಿ ವೈಯಕ್ತಿಕ ಸಾಮರ್ಥ್ಯದಲ್ಲಿ ಅಥವಾ

(ಡಿ) ತಂದೆಯಾಗಿ/ತಾಯಿಯಾಗಿ/ಕಾನೂನು ಸಮ್ಮತ ಪೋಷಕನಾಗಿ ಅಪ್ರಾಪ್ತ ವಯಸ್ಕನ ಪರವಾಗಿ–ಹೊಂದಿರಬಹುದು.

(ii) ಹಿಂದು ಅವಿಭಾಜ್ಯ ಕುಟುಂಬವು ಹೊಂದಿರಬಹುದು.

**3. ಹೂಡಿಕೆಯ ಮಿತಿ**

ಬಾಂಡುಗಳಲ್ಲಿ ಹಣ ಹೂಡುವುದಕ್ಕೆ ಯಾವುದೇ ಗರಿಷ್ಠ ಮಿತಿ ಇರುವುದಿಲ್ಲ.

**4. ತೆರಿಗೆ ರಿಯಾಯಿತಿ:**

(i) ವರಮಾನ ತೆರಿಗೆ: ಬಾಂಡುಗಳ ಮೇಲಿನ ಬಡ್ಡಿಯನ್ನು ವರಮಾನ ತೆರಿಗೆ ಅಧಿನಿಯಮ, 1961ರ ಅಡಿಯಲ್ಲಿ ವರಮಾನ ತೆರಿಗೆಯಿಂದ ವಿನಾಯಿತಿಗೊಳಿಸಲಾಗುವುದು.

(ii) ಸಂಪತ್ತು ತೆರಿಗೆ: ಬಾಂಡುಗಳನ್ನು ಸಂಪತ್ತು ತೆರಿಗೆ ಅಧಿನಿಯಮ, 1957ರ ಅಡಿಯಲ್ಲಿ ಸಂಪತ್ತು ತೆರಿಗೆಯಿಚಿದ ವಿನಾಯಿತಿಗೊಳಿಸಲಾಗುವುದು.

**5. ನೀಡಿಕೆ ಬೆಲೆ**

(i) ಬಾಂಡುಗಳನ್ನು ಮುಖಬೆಲೆಯಲ್ಲಿ ಅಂದರೆ ಶೇಕಡಾ ರೂ 100.00 ರಂತೆ ನೀಡಲಾಗುವುದು

(೩) ಬಾಂಡುಗಳನ್ನು ಕನಿಷ್ಠ ರೂ 1000/– ಮೊಬಲಗಿಗೆ (ಮುಖ ಬೆಲೆ) ಮತ್ತು ಅದರ ಗಣಕಗಳಲ್ಲಿ ನೀಡಲಾಗುವುದು. ಅದರಂತೆ, ನೀಡಿಕೆ ಬೆಲೆಯು ಪ್ರತಿ ರೂ 1000 ಕ್ಕೆ ರೂ 1000 (ನಾಮ ಮಾತ್ರ) ಆಗಿರುತ್ತದೆ.

**6. ವಂತಿಗೆ**

ಬಾಂಡುಗಳಿಗೆ ನೀಡುವ ವಂತಿಗೆಯು ನಗದು/ಡ್ರಾಫ್ಟ್‌ಗಳು/ಚೆಕ್‌ಗಳ ಕಚೇರಿಗಳ ರೂಪದಲ್ಲಿರುತ್ತದೆ. ಚೆಕ್‌ಗಳನ್ನು ಅಥವಾ ಡ್ರಾಫ್ಟ್‌ಗಳನ್ನು ಕೆಳಗೆ ಪ್ಯಾರಾ 10 ರಲ್ಲಿ ನಿರ್ದಿಷ್ಟಪಡಿಸಿರುವಂತೆ ಸ್ವೀಕರಿಸುವ ಅಧಿಕಾರಿಯ ಹೆಸರಿನಲ್ಲಿ ಮತ್ತು ಅರ್ಜಿಗಳನ್ನು ಸಲ್ಲಿಸಿದ ಸ್ಥಳದಲ್ಲಿ ಸಂದಾಯವಾಗುವಂತೆ ತೆಗೆಯತಕ್ಕದ್ದು.

**7. ನೀಡಿಕೆ ದಿನಾಂಕ**

(೧) ಬಾಂಡುಗಳನ್ನು **24ನೇ ಮಾರ್ಚ್ 2003** ರಿಂದ ಪರಿಣಮಿಸುವಂತೆ ನೀಡಲಾಗುವುದು ಮತ್ತು ಮುಂದಿನ ಸೂಚನೆಯವರೆಗೆ ಚಾಲ್ತಿಯಲ್ಲಿರುತ್ತವೆ.

(೨) ಸ್ಟಾಕ್ ಸರ್ಟಿಫಿಕೇಟ್ ಅಥವ ಬಾಂಡ್ ಲೆಡ್ಜರ್ ಅಕೌಂಟ್ ರೂಪದಲ್ಲಿ ಬಾಂಡುಗಳನ್ನು ನೀಡುವ ದಿನಾಂಕವು ನಗದು ರೂಪದಲ್ಲಿ ವಂತಿಗೆಯನ್ನು ಸ್ವೀಕರಿಸಿದ ದಿನಾಂಕವಾಗಿರುತ್ತದೆ ಅಥವಾ ಡ್ರಾಫ್ಟ್/ಚೆಕ್ ನಗದೀಕರಣಗೊಂಡ ದಿನಾಂಕವಾಗಿರುತ್ತದೆ.

**8. ನಮೂನೆ**

(೧) ಬಾಂಡುಗಳನ್ನು ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ನೀಡಲಾಗುವುದು ಮತ್ತು ಅವುಗಳನ್ನು **ಬಾಂಡ್ ಲೆಡ್ಜರ್** ಅಕೌಂಟ್ (ಬಿಎಲ್ಎ) ಎಂಬ ಖಾತೆಯಲ್ಲಿ ಧಾರಕನ ಲೆಕ್ಕದಲ್ಲಿ ಹೊಂದಿರತಕ್ಕದ್ದು.

(ಎ) ಹಾಲಿ ಬಾಂಡ್ ಲೆಡ್ಜರ್ ಶ್ರೇಣಿಗಳನ್ನು ಮುಂದುವರೆಸಬೇಕಾಗುತ್ತದೆ. ಹಾಲಿ ಇರುವ ಬಿಎಲ್ಎ ಧಾರಕನು ಶೇ 6.5ರ ಉಳಿತಾಯ ಬಾಂಡುಗಳಲ್ಲಿ ಹೂಡುವ ಯಾವುದೇ ಬಂಡವಾಳವನ್ನು ಅದೇ ಬಿಎಲ್ಎ ಅಡಿಯಲ್ಲಿ ಹೊಸ ಹೂಡಿಕೆಯಾಗಿ ಪರಿಭಾವಿಸಲಾಗುವುದು. ಆದರೆ, ಹೂಡಿಕೆದಾರನು/ಳು ತನ್ನ ಹೆಸರಿನಲ್ಲಿ ಯಾವುದೇ ಬಿಎಲ್ಎಯನ್ನು ಹೊಂದಿರದಿದ್ದರೆ, ಆಗ ಹೊಸ ಬಿಎಲ್ಎ ಯನ್ನು ತೆರೆಯತಕ್ಕದ್ದು.

(ಬಿ) ಬಾಂಡ್ ಲೆಡ್ಜರ್‌ಅಕೌಂಟ್ ರೂಪದಲ್ಲಿರುವ ಬಾಂಡುಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಸಾರ್ವಜನಿಕ ಋಣದ ಕಚೇರಿಗಳು, ಈ ಕೆಳಗಿನ ಪ್ಯಾರಾ 10ರ ಅನ್ವಯ ಭಾರತೀಯ ರಿಸರ್ವ್ ಬ್ಯಾಂಕು ಅಧಿಕಾರ ನೀಡಿರುವಂಥ ಏಜೆನ್ಸಿ ಬ್ಯಾಂಕುಗಳು ಗೊತ್ತುಪಡಿಸಿದ ಶಾಖೆಗಳು ಮತ್ತು ಎಸ್‌ಹೆಚ್‌ಸಿಐಎಲ್ ಇವು ನೀಡುತ್ತವೆ ಮತ್ತು ಅವು ಹೊಂದಿರುತ್ತವೆ. ಅನುಬಂಧ 1 ರಲ್ಲಿ ನಿರ್ದಿಷ್ಟಪಡಿಸಿರುವಂತೆ ಬಂಡವಾಳ ಪ್ರಮಾಣಪತ್ರವನ್ನು ಬಾಂಡ್ ಲೆಡ್ಜರ್ ಅಕೌಂಟ್ ರೂಪದಲ್ಲಿ (ಅನ್ವಯಿಸುವಂತೆ ನಮೂನೆ ಫಿ ಅಥವಾ ನಮೂನೆ ವೈ ನಲ್ಲಿ) ಬಾಂಡುಗಳ ಧಾರಕನಿಗೆ ನೀಡಲಾಗುವುದು.

(ಸಿ) ಸ್ಟಾಕ್ ಸರ್ಟಿಪಿಕೇಟ್ ರೂಪದಲ್ಲಿರುವ ಬಾಂಡುಗಳನ್ನು ಕೆಳಗಿನ ಪ್ಯಾರಾ 10 (೨) (ಎ) ಯಲ್ಲಿ ತಿಳಿಸಿರುವಂತೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಕಚೇರಿಗಳಲ್ಲಿ ಮಾತ್ರ ನೀಡಲಾಗುವುದು.

(ಡಿ) ಬಾಂಡ್ ಲೆಡ್ಜರ್ ಅಕೌಂಟ್‌ನ ಸಂಬಂಧದಲ್ಲಿ ಬಂಡವಾಳ ಪ್ರಮಾಣ ಪತ್ರವನ್ನು ಮತ್ತು ಸ್ಟಾಕ್ ಸರ್ಟಿಫಿಕೇಟ್‌ನ್ನು ಸಂಚಿತ ಮತ್ತು ಸಂಚಿತವಲ್ಲದ ಬಾಂಡುಗಳಿಗೆ ಅನುಕ್ರಮವಾಗಿ ಹಸಿರು ಮತ್ತು ಕಂದು ಬಣ್ಣದಲ್ಲಿ ನೀಡಲಾಗುವುದು.

(೨) ಸ್ಟಾಕ್ ಸರ್ಟಿಪಿಕೇಟ್ ರೂಪದಲ್ಲಿರುವ ಬಾಂಡುಗಳನ್ನು ಸ್ಕ್ರಿಪ್‌ನ ಅಲಭ್ಯತೆಯಿಂದಾಗಿ ಅಥವಾ ಬೇರೆ ಕಾರಣದಿಂದ, ವಂತಿಗೆ ಸ್ವೀಕರಿಸಿದ ಕೂಡಲೇ ನೀಡಲಾಗದಿದ್ದಾಗ ಸ್ವೀಕರಿಸುವ ಆರ್‌ಬಿಐ ಕಚೇರಿಯು ವಂತಿಗೆದಾರನು ಸಲ್ಲಿಸಿದ ವಂತಿಗೆಯ ಮೌಲ್ಯಕ್ಕೆ ಆತನ ಹೆಸರಿಗೆ ಒಂದು ತಾತ್ಕಾಲಿಕ ರಸೀತಿಯನ್ನು ನೀಡುತ್ತದೆ.

(೩) ಒಂದು ರೂಪದಲ್ಲಿ ನೀಡಿದ ಬಾಂಡುಗಳು ಇತರ ರೂಪಕ್ಕೆ **ಬದಲಾಯಿಸಲು ಅರ್ಹವಾಗಿರುವುದಿಲ್ಲ**.

(೩) ನಗದು ಅರ್ಜಿಗಳ ಸಂಬಂಧದಲ್ಲಿ ಧಾರಣಾ ಪ್ರಮಾಣಪತ್ರವನ್ನು ಚಾಲ್ತಿ ಸೂಚನೆಗಳ ಪ್ರಕಾರ ಅದೇ ದಿನ ನೀಡತಕ್ಕದ್ದು.

**9. ಅರ್ಜಿಗಳು**

(೧) ಬಾಂಡುಗಳಿಗಾಗಿ ಸಲ್ಲಿಸುವ ಅರ್ಜಿಗಳನ್ನು ನಮೂನೆ " ಎ" (ಅನುಬಂಧ–2)ರಲ್ಲಿ ಅಥವಾ ಅದಕ್ಕೆ ಬಹುಮಟ್ಟಿಗೆ ಹೋಲಿಕೆಯಾಗುವ ಯಾವುದೇ ಇತರ ನಮೂನೆಯಲ್ಲಿ ಹಣ ಹಾಗು ಅರ್ಜಿದಾರನ ಪೂರ್ಣ ಹೆಸರು ಮತ್ತು ವಿಳಾಸವನ್ನು ಸ್ಪಷ್ಟವಾಗಿ ತಿಳಿಸಿ ಸಲ್ಲಿಸತಕ್ಕದ್ದು.

(೨) ಅರ್ಜಿಯೊಂದಿಗೆ ಮೇಲಿನ ಪ್ಯಾರಾ 6ರಲ್ಲಿ ಸೂಚಿಸಿರುವಂತೆ ನಗದು/ಡ್ರಾಫ್ಟ್‌ಗಳು/ಚೆಕ್ಕುಗಳ ರೂಪದಲ್ಲಿ ಅಗತ್ಯ ಹಣ ಸಂದಾಯ ಮಾಡಿರುವ ದಾಖಲೆ ಇರತಕ್ಕದ್ದು.

**10. ಸ್ವೀಕರಿಸುವ ಅಧಿಕಾರಿ**

(೧) ಬಾಂಡ್ ಲೆಡ್ಜರ್ ಅಕೌಂಟ್ ರೂಪದಲ್ಲಿರುವ ಬಾಂಡುಗಳ ಅರ್ಜಿಗಳನ್ನು ಈ ಮುಂದಿನ ಕಡೆಗಳಲ್ಲಿ ಸ್ವೀಕರಿಸಲಾಗುವುದು:

(ಎ) ಅಹಮದಾಬಾದ್, ಬೆಂಗಳೂರು, ಭುವನೇಶ್ವರ್, ಚೆನ್ನೈ, ಗುವಾಹಟಿ, ಹೈದರಾಬಾದ್, ಜೈಪುರ, ಕಾನ್ಪುರ, ಮುಂಬೈ (ಕೋಟೆ) ಮುಂಬೈ (ಬೈಕುಲ್ಲ) ನಾಗಪುರ, ನವದೆಹಲಿ, ಪಾಟ್ನಾ ಮತ್ತು ತಿರುವನಂತಪುರಂಗಳಲ್ಲಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಕಚೇರಿಗಳು.

(ಬಿ) ಅನುಬಂಧ–3ರಲ್ಲಿ ನಿರ್ದಿಷ್ಟಪಡಿಸಿರುವಂತೆ ಭಾರತೀಯ ಸ್ಟೇಟ್ ಬ್ಯಾಂಕ್‌ನ, ಸಹವರ್ತಿ ಬ್ಯಾಂಕುಗಳ, ರಾಷ್ಟ್ರೀಕೃತ ಬ್ಯಾಂಕುಗಳ ನಾಲ್ಕು ಖಾಸಗಿ ವಲಯ ಬ್ಯಾಂಕುಗಳ ಮತ್ತು ಎಸ್‌ಹೆಚ್‌ಸಿಐಎಲ್‌ನ ಅಧಿಕೃತ ಶಾಖೆಗಳು.

(ಸಿ) ಭಾರತೀಯ ರಿಸರ್ವ್ ಬ್ಯಾಂಕು ಈ ಬಗ್ಗೆ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಬ್ಯಾಂಕು ಅಥವಾ ಬ್ಯಾಂಕುಗಳ ಮತ್ತು ಎಸ್‌ಹೆಚ್‌ಸಿಐಎಲ್ ಶಾಖೆಗಳು.

(೨) ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿನ ಬಾಂಡುಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಮೇಲೆ ಪ್ಯಾರಾ 10 (1) (ಎ)ನಲ್ಲಿ ತಿಳಿಸಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಕಚೇರಿಗಳಲ್ಲಿ ಮಾತ್ರ ಸ್ವೀಕರಿಸಲಾಗುವುದು.

**11. ನಾಮ ನಿರ್ದೇಶನ**

ಬಾಂಡ್‌ನ ಏಕೈಕ ಧಾರಕ ಅಥವಾ ಏಕೈಕ ಜೀವಂತ ಧಾರಕನು ಒಬ್ಬ ವ್ಯಕ್ತಿಯಾಗಿ ಬಾಂಡ್‌ಗೆ ಮತ್ತು ಆತ/ಆಕೆ ಮೃತಪಟ್ಟ ಸಂದರ್ಭದಲ್ಲಿ ಹಣ ಸಂದಾಯ ಪಡೆಯಲು ಹಕ್ಕುದಾರರಾದ ಒಬ್ಬ ಅಥವಾ ಹೆಚ್ಚು ಜನರನ್ನು ನಮೂನೆ ಬಿ ಯಲ್ಲಿ (ಅನುಬಂಧ–4) ಅಥವಾ ಅದಕ್ಕೆ ಬಹುಮಟ್ಟಿಗೆ ಹೋಲಿಕೆಯಾಗುವಂಥ ನಮೂನೆಯಲ್ಲಿ ನಾಮ ನಿರ್ದೇಶನ ಮಾಡಬಹುದು.

**12. ವರ್ಗಾವಣೀಯತೆ**

ಬಾಂಡ್ ಲೆಡ್ಜರ್ ಅಕೌಂಟ್ ರೂಪದಲ್ಲಿರುವ ಬಾಂಡುಗಳನ್ನು ಧಾರಕನು ಅನುಬಂಧ 6ಎ ಯಲ್ಲಿ ನೀಡಿರುವ ವರ್ಗಾವಣೆ ನಮೂನೆಯನ್ನು ಬರೆದುಕೊಡುವ ಮೂಲಕ ಮತ್ತು ಅಫಿಡಾವಿಟ್ ಅನ್ನು ಬರೆದುಕೊಡುವ ಮೂಲಕ ಭಾರತೀಯ ಕಂಪನಿಗಳ ಅಧಿನಿಯಮ, 1956ರ 6ನೇ ಪ್ರಕರಣದಲ್ಲಿ ವ್ಯಾಖ್ಯಾನಿಸಿರುವಂತೆ ಒಬ್ಬ ಸಂಬಂಧಿಗೆ ಕೊಡುಗೆ ರೂಪದಲ್ಲಿ ಹೊರತು ಬೇರೆ ರೀತಿಯಲ್ಲಿ ವರ್ಗಾಯಿಸತಕ್ಕದ್ದಲ್ಲ.

**13. ಬಡ್ಡಿ**

(೧) ಬಾಂಡುಗಳನ್ನು ಹೂಡಿಕೆದಾರನ ಆಯ್ಕೆಯಂತೆ ಸಂಚಿತ ಮತ್ತು ಸಂಚಿತವಲ್ಲದ ರೂಪದಲ್ಲಿ ನೀಡಲಾಗುವುದು.

(೨) ಬಾಂಡುಗಳಿಗೆ ವರ್ಷಕ್ಕೆ ಶೇ. 6.5ರ ದರದಲ್ಲಿ ಬಡ್ಡಿ ದೊರೆಯುತ್ತದೆ. ಸಂಚಿತವಲ್ಲದ ಬಾಂಡುಗಳ ಮೇಲಿನ ಬಡ್ಡಿಯನ್ನು ಮೇಲಿನ ಪ್ಯಾರಾ 7ರ ಅನ್ವಯ ನೀಡಿದ ದಿನಾಂಕದಿಂದ ಅರ್ಧ ವಾರ್ಷಿಕ ಅಂತರಗಳಲ್ಲಿ ಸಂದಾಯ ಮಾಡಲಾಗುವುದು. ಸಂಚಿತ ಬಾಂಡುಗಳ ಮೇಲಿನ ಬಡ್ಡಿಯನ್ನು ಅರ್ಧವಾರ್ಷಿಕ ಬಿಡುವುಗಳಲ್ಲಿ ಸಂಯೋಜಿಸಿ ಬಡ್ಡಿಯ ಜೊತೆಗೆ ಅವಧಿ ತುಂಬಿದ ಮೇಲೆ ಸಂದಾಯ ಮಾಡಲಾಗುವುದು. ಎರಡನೆಯ ಸಂದರ್ಭದಲ್ಲಿ ಬಾಂಡುಗಳ ಅವಧಿ ತುಂಬುವಾಗಿನ ಮೌಲ್ಯ ಪ್ರತಿ 1000 ರೂಗಳಿಗೆ (ನಾಮ ಮಾತ್ರ) ರೂ 1377 (ಅಸಲು ಮತ್ತು ಬಡ್ಡಿಯಾಗಿ) ಆಗಿರುತ್ತದೆ. ಸಂಚಿತವಲ್ಲದ ಬಾಂಡುಗಳನ್ನು ಆಯ್ಕೆ ಮಾಡಿಕೊಂಡ ಧಾರಕರಿಗೆ ಬಡ್ಡಿಯನ್ನು, ಮೇಲಿನ ಪ್ಯಾರಾ 7ರ ಅನ್ವಯ ನೀಡಿದ ದಿನಾಂಕದಿಂದ ಸಂದರ್ಭಾನುಸಾರ ಜೂನ್ 30ರವರೆಗೆ/ ಡಿಸೆಂಬರ್ 31ರವರೆಗೆ ಮತ್ತು ಆ ತರುವಾಯ ಜೂನ್ 30 ಕ್ಕೆ / ಡಿಸೆಂಬರ್ 31 ಕ್ಕೆ ಅಂತ್ಯವಾದ ಅವಧಿಗೆ ಅರ್ಧವರ್ಷಕ್ಕೊಮ್ಮೆ ಜುಲೈ 1 ರಂದು ಮತ್ತು ಜನವರಿ 1 ರಂದು ಸಂದಾಯ ಮಾಡಲಾಗುವುದು.

ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿನ ಬಾಂಡುಗಳ ಮೇಲೆ ಮತ್ತು " ಬಾಂಡ್ ಲೆಡ್ಜರ್ ಅಕೌಂಟ್" ರೂಪದಲ್ಲಿನ ಬಾಂಡುಗಳ ವಿಷಯದಲ್ಲಿ ಹೂಡಿಕೆದಾರನು/ಧಾರಕನು ಮಾಡಿಕೊಂಡ ಆಯ್ಕೆಯಂತೆ ಚೆಕ್/ವಾರಂಟ್ ಮೂಲಕ ಅಥವಾ ಧಾರಕನ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಇಸಿಎಸ್ ಮುಖಾಂತರ ಸಂದಾಯ ಮಾಡಲಾಗುವುದು.

**14. ಬಾಂಡುಗಳ ಮೇಲೆ ಮುಂಗಡಗಳು (ಸಾಲಗಳು)/ವ್ಯಾಪಾರಾರ್ಹತೆ**

ಬಾಂಡುಗಳನ್ನು ದ್ವಿತೀಯ ಹಂತದ ಮಾರುಕಟ್ಟೆಯಲ್ಲಿ ಮಾರಾಟ ಮಾಡತಕ್ಕದ್ದಲ್ಲ ಮತ್ತು ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಮುಂತಾದವು ನೀಡುವ ಸಾಲಗಳಿಗೆ ಅಧಿಕ ಭದ್ರತೆಯಾಗಿ ನೀಡಲು ಈ ಬಾಂಡುಗಳು ಅರ್ಹವಾಗಿರತಕ್ಕದ್ದಲ್ಲ.

**15. ಮರು ಸಂದಾಯ**

ಬಾಂಡುಗಳನ್ನು ನೀಡಿದ ದಿನಾಂಕದಿಂದ 5 (ಐದು) ವರ್ಷ ಮುಕ್ತಾಯಗೊಂಡ ನಂತರ ಅವುಗಳ ಹಣವನ್ನು ಮರು ಸಂದಾಯ ಮಾಡಲಾಗುತ್ತಿದೆ ಬಾಂಡು ಅವಧಿ ತುಂಬಿದ ನಂತರ ಅದರ ಮೇಲೆ ಬಡ್ಡಿ ಪ್ರಾಪ್ತವಾಗುವುದಿಲ್ಲ.

**(೨) ಅವಧಿ ತುಂಬುವ ಮೊದಲೇ ಪೂರ್ವ ನಗದೀಕರಣಕ್ಕೆ ಅವಕಾಶ**

ನೀಡಿದ ದಿನಾಂಕದಿಂದ ಕನಿಷ್ಠ 3 ವರ್ಷಗಳ ನಗದೀಕರಿಸಲಾಗದ ಅವಧಿಯ (ಲಾಕ್ ಇನ್ ಪಿರಿಯಡ್) ನಂತರ ಹೂಡಿಕೆದಾರನು 6ನೇ ಅರ್ಧವರ್ಷದ ತರುವಾಯ ಯಾವುದೇ ಸಮಯದಲ್ಲಿ ಬಾಂಡುಗಳನ್ನು ಹಿಂದಕ್ಕೆ ಒಪ್ಪಿಸಬಹುದು. ಆದರೆ ವಿಮೋಚನಾ ಹಣ ಸಂದಾಯವನ್ನು ಮುಂದಿನ ಬಡ್ಡಿ ಸಂದಾಯದ ದಿನಂಕದಂದು (ಕೆಳಗೆ ಸೂಚಿಸಿರುವಂತೆ) ಮಾಡಲಾಗುವುದು. ಹಾಗಾಗಿ ಅವಧಿ ತುಂಬುವುದಕ್ಕೆ ಮೊದಲೇ ನಗದೀಕರಣ ಜಾರಿಗೊಳ್ಳುವ ದಿನಾಂಕವು ಪ್ರತಿ ವರ್ಷದ 1ನೇ ಜುಲೈ ಮತ್ತು 1ನೇ ಜನವರಿಯಾಗಿರುತ್ತದೆ. ಆದರೆ, ಬಾಕಿ ಇರುವ ಮತ್ತು ಕಳೆದ ಆರು ತಿಂಗಳ ಧಾರಣಾವಧಿಗೆ ಸಂದಾಯ ಮಾಡಬೇಕಾದ

ಬಡ್ಡಿಯನ್ನು ಅಂಥ ಪ್ರಕರಣಗಳಲ್ಲಿ ಸಂಚಿತ ಮತ್ತು ಸಂಚಿತವಲ್ಲದ ಎರಡೂ ಬಾಂಡುಗಳ ಸಂಬಂಧದಲ್ಲಿ ವಸೂಲು ಮಾಡಲಾಗುವುದು.

| **ಧಾರಣಾವಧಿ** | **ಹೂಡಿದ ಪ್ರತಿ 1000/– ರೂ ಗೆ ಸಂದಾಯ ಮಾಡಬೇಕಾದ ಮೊಬಲಗು** | |
|---|---|---|
| | ಸಂಚಿತವಲ್ಲದ | ಸಂಚಿತ |
| 7ನೇ ಅರ್ಧವಾರ್ಷಿಕ | ರೂ 1016.25 | ರೂ 1231.25 |
| 8ನೇ ಅರ್ಧವಾರ್ಷಿಕ | ರೂ 1016.25 | ರೂ 1271.20 |

| | | |
|---|---|---|
| 9ನೇ ಅರ್ಧವಾರ್ಷಿಕ | ರೂ 1016.25 | ರೂ 1312. 05 |

**16. ದಳ್ಳಾಳಿ ರುಸುಮ ಮತ್ತು ನಿರ್ವಹಣಾ ವೆಚ್ಚಗಳು**

(೧) ಮೇಲಿನ ಪ್ಯಾರಾ 10 (ಬಿ) ಮತ್ತು (ಸಿ) ಯಲ್ಲಿ ಪಟ್ಟಿ ಮಾಡಿರುವ ಸ್ವೀಕರಿಸುವ ಕಚೇರಿಗಳಲ್ಲಿ ನೋಂದಾಯಿಸಿಕೊಂಡಿರುವ ಪಿಪಿಎಫ್ ಮತ್ತು ಯುಟಿಐ ಏಜೆಂಟರುಗಳು ಸೇರಿದಂತೆ ದಳ್ಳಾಳಿಗಳಿಗೆ ಮತ್ತು ಅಧಿಕೃತಗೊಳಿಸಲಾದ ಬ್ಯಾಂಕುಗಳಿಗೂ ಕೂಡ ತಮ್ಮ ಕಕ್ಷಿದಾರನ ಪರವಾಗಿ ಅವರು ಸಲ್ಲಿಸಿದ ಹಾಗೂ ಅವರ ಮೊಹರು ಹಾಕಿರುವಂತಹ ಅರ್ಜಿಗಳ ಮೇಲೆ ಪ್ರತಿ 100 ರೂಪಾಯಿಗೆ 1.00 ರೂಪಾಯಿ (ಒಂದು ರೂಪಾಯಿ ಮಾತ್ರ) ಯಂತೆ ದಳ್ಳಾಳಿ ರುಸುಮು ಸಂದಾಯ ಮಾಡಲಾಗುವುದು.

(೨) ದಳ್ಳಾಳಿ ರುಸುಮು ಮತ್ತು ಕಮೀಷನ್ನನ್ನು ಸಿಎಎಸ್, ನಾಗಪುರ ಇದು ಮಾಸಿಕ ಆಧಾರದ ಮೇಲೆ ಸಂದಾಯ ಮಾಡುತ್ತದೆ.

(೩) ನಿರ್ವಹಣಾ ಮತ್ತು ಸೇವಾ ವೆಚ್ಚಗಳನ್ನು ಅಧಿಕಾರ ವ್ಯಾಪ್ತಿ ಹೊಂದಿರುವ ಪಿಡಿಒ ಸಂದಾಯ ಮಾಡುತ್ತದೆ.

**17. ವಿವರಪಟ್ಟಿಗಳ ಸಲ್ಲಿಕೆ**

(೧) ಸುತ್ತೋಲೆ ಸಂಖ್ಯೆ ಸಿಒ.ಡಿಟಿ.13.01.272/ಹೆಚ್–2906/2002–03 ದಿನಾಂಕ ಫೆಬ್ರವರಿ 26, 2003ರೊಂದಿಗೆ ಓದಿಕೊಳ್ಳಲಾದ ಪ್ರಕ್ರಿಯಾ ಜ್ಞಾಪನ ಪತ್ರದ ಪ್ಯಾರಾ 1.7ರಲ್ಲಿ ಒಳಗೊಂಡಿರುವ ಸೂಚನೆಗಳನ್ನು ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಏಜೆನ್ಸಿಗಳು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳತಕ್ಕದ್ದು.

(೨) ಏಜೆನ್ಸಿಗಳು ಸಂಚಿತ ಮತ್ತು ಸಂಚಿತವಲ್ಲದ ಎರಡೂ ಬಗೆಯ ನಮೂನೆಗಳಲ್ಲಿ ನೀಡಿದ ಬಾಂಡುಗಳನ್ನು ತ್ರೈಮಾಸಿಕ ರೂಪಾಯಿ ಋಣ ತಃಖ್ತೆಯಲ್ಲಿ/ಗಳಲ್ಲಿ ತಪ್ಪದೆ ಸೂಕ್ತ ರೀತಿಯಲ್ಲಿ ವರದಿ ಮಾಡತಕ್ಕದ್ದು.

18. ಡಿಎಡಿನಲ್ಲಿ ತೆರೆಯಲಾದ ವಿಶೇಷ ಚಾಲ್ತಿ ಖಾತೆಯನ್ನು ಪ್ರತ್ಯೇಕವಾಗಿಡಬೇಕು ಮತ್ತು ಅದು ಶೇ. 6.5ರ ಉಳಿತಾಯ ಬಾಂಡುಗಳು, 2003 (ತೆರಿಗೆಗೆ ಒಳಪಡದ) ಕ್ಕೆ ಪ್ರತ್ಯೇಕವಾಗಿರತಕ್ಕದ್ದು.

19. ಮೇಲಿನದಕ್ಕೆ ಸಂಬಂಧಿಸಿದ ಹತ್ತು ಅಂಕಿಗಳ ಸಾಲ ಸಂಕೇತ 8000322010.

20. ಶೇ. 7ರ ಉಳಿತಾಯ ಬಾಂಡುಗಳು, 2002ರ ಸಂಬಂಧದಲ್ಲಿ ಈಗಾಗಲೇ ಪೂರೈಸಲಾಗಿರುವ ಸ್ಟಾಕ್ ಸರ್ಟಿಫಿಕೇಟುಗಳನ್ನು ಮತ್ತು ಬಡ್ಡಿ ವಾರಂಟುಗಳನ್ನು ಈ ಯೋಜನೆಗೆ ಬಳಸಿಕೊಳ್ಳಬಹುದು.

21. ಶೇ. 6.5ರ ಉಳಿತಾಯ ಬಾಂಡುಗಳು, 2003 (ತೆರಿಗೆಗೆ ಒಳಪಡದ) ಕ್ಕೆ ಅಗತ್ಯವಿರುವ ತಂತ್ರಾಂಶ ಪ್ಯಾಕೇಜನ್ನು ಅಭಿವೃದ್ಧಿ ಪಡಿಸಿ ಒದಗಿಸುವಂತೆ ಡಿಐಟಿಯನ್ನು ಕೋರಲಾಗಿದೆ.

22. ಈ ಹಿಂದೆ ಶೇ. 7ರ ಉಳಿತಾಯ ಬಾಂಡುಗಳು, 2002ಕ್ಕೆ ಸಲಹೆ ಮಾಡಿರುವಂತೆ ನಾಗಪುರದ ಸಿಎಎಸ್‌ಗೆ ವ್ಯವಹಾರವನ್ನು ವರದಿ ಮಾಡುವ ಅದೇ ವಿಧಾನವನ್ನು ನೀವು ಅನುಸರಿಸತಕ್ಕದ್ದು.

23. ನೀವು ದಯವಿಟ್ಟು ಅಧಿಸೂಚನೆಯ ಆಮೂಲಾಗ್ರವಾಗಿ ಓದಿಕೊಂಡು ಬಾಂಡ್‌ನ ಪ್ರಮುಖ ಲಕ್ಷಣಗಳನ್ನು ಚೆನ್ನಾಗಿ ಮನನ ಮಾಡಿಕೊಳ್ಳತಕ್ಕದ್ದು. ಸರ್ಕಾರಿ ಅಧಿಸೂಚನೆಯಲ್ಲಿ ಗೊತ್ತುಪಡಿಸಿರುವಂತೆ **ಮಾರ್ಚ್ 24, 2003**ರಿಂದ ಪರಿಣಮಿಸುವಂತೆ ನಿಮ್ಮ ಗೊತ್ತುಪಡಿಸಿದ ಶಾಖೆಗಳಲ್ಲಿನ ಕೌಂಟರುಗಳಲ್ಲಿ ಬಾಂಡುಗಳನ್ನು ನೀಡಲು ಅಗತ್ಯವಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವಂತೆಯೂ ನೀವು ದಯವಿಟ್ಟು ನೋಡಿಕೊಳ್ಳುವುದು. ನೀವು ನಿಮ್ಮ ಪ್ರದೇಶದಲ್ಲಿನ ಸ್ವೀಕರಿಸುವ ಅಧಿಕಾರಿಗಳ ಸಭೆಯೊಂದನ್ನು ಕರೆದು ಹೊಸ ಬಾಂಡ್‌ನ ವಿವರಗಳನ್ನು ಅವರಿಗೆ ಸಂಕ್ಷಿಪ್ತವಾಗಿ ವಿವರಿಸಿ ಹೇಳಿ.

24. ಪ್ರಕ್ರಿಯಾ ಜ್ಞಾಪನ ಪತ್ರದಲ್ಲಿ ವಿವರಿಸಿರುವಂತೆ ಶೇ. 9 ರ ಪರಿಹಾರ ಬಾಂಡುಗಳು 1999 ರ ಸಂಬಂಧದಲ್ಲಿ ನೀಡಲಾಗಿರುವ ಮಾರ್ಗಸೂಚಿಗಳು ಶೇ. 6.5ರ ಉಳಿತಾಯ ಬಾಂಡುಗಳು, 2003ರ (ತೆರಿಗೆಗೆ ಒಳಪಡದ) ಮೇಲೆ ತರುವಾಯ ನೀಡಿದ ಚಾಲ್ತಿ ಸೂಚನೆಗಳೊಂದಿಗೆ ಓದಿಕೊಳ್ಳಲಾದ ಆ ಬಾಂಡುಗಳ ಸಂಬಂಧದಲ್ಲಿ ಮಾಡಿದ ಸೂಕ್ತ ತಿದ್ದುಪಡಿಗಳೊಂದಿಗೆ ಅನ್ವಯವಾಗುತ್ತವೆ.

25. ಹಿಂದಿನ ಪ್ಯಾರಾಗಳಲ್ಲಿ ಉಲ್ಲೇಖಿಸಿರುವ ಅನುಬಂಧಿಸುವ ಪ್ರಪತ್ರಗಳು ಪ್ರಕ್ರಿಯಾ ಜ್ಞಾಪನ ಪತ್ರದಲ್ಲಿ ಹಾಗೂ ಶೇ. 7ರ ಉಳಿತಾಯ ಬಾಂಡುಗಳು, 2002ರ ಸಂಬಂಧದಲ್ಲಿ ನೀಡಿರುವ ಅಧಿಸೂಚನೆಯಲ್ಲಿ ಈಗಾಗಲೇ ಲಭ್ಯವಿವೆ. ಈ ಪ್ರಪತ್ರಗಳನ್ನು ಸೂಕ್ತವಾಗಿ ಮಾರ್ಪಾಡು ಮಾಡಿಕೊಂಡು ಬಳಸಿಕೊಳ್ಳಬಹುದು.

26. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,

(ಆರ್. ಸಿ. ದಾಸ್)
ಪ್ರಧಾನ ವ್ಯವಸ್ಥಾಪಕ.